(ದಿನಾಂಕಃ 28-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)

<u>ಪಾಟಿ ಸವಾಲುಃ ಶ್ರೀ ಪಿ ಆರ್ ಸಿ ಪ್ರತಿವಾದಿ ಪರ ವಕೀಲರಿಂದ -</u>

ಪಡಿತರ ಕುಪನ ಇದು ಗುಡಸ ಗ್ರಾಮದ ವಿಳಾಸದಲ್ಲಿರುತ್ತದೆ. ಶೆಟ್ಟೆಪ್ಪಗಾಗಲೀ ನನಗಾಗಲೀ ಕಾಂಬಳೆ ಎಂದು ಅಡ್ಡ ಹೆಸರು ಕರೆಯುವುದಿಲ್ಲ ಎಂದರೆ ಸರಿ. ಗುಡಸ ಗ್ರಾಮದಲ್ಲಿ ಕಾಂಬಳೆ ಎಂಬ ಅಡ್ಡಹೆಸರಿನ ಸುಮಾರು 15 ಕುಟುಂಬಗಳು ಇವೆ ಎಂದರೆ ಸರಿ. ಅದೇ ರೀತಿ ಬಸವ್ವ ಎಂಬ ಹೆಸರಿನವರು ಬಹಳ ಜನ ಇದ್ದಾರೆ ಎಂದರೆ ಸರಿ. ಪಡಿತರ ಚೀಟಿ ಪಡೆದುಕೊಂಡು ಎಷ್ಟು ವರ್ಷಗಳಾಗಿವೆ ಎಂದು ನನಗೆ ಗೊತ್ತಿಲ್ಲ. ಶೆಟ್ಟೆಪ್ಪ ತೀರಿಕೊಂಡ ನಂತರ ದಾವಾ ಜಮೀನಿಗೆ ನಾವು 3 ಜನ ಅಕ್ಕತಂಗಿಯರು ಹೆಸರು ಹಚ್ಚಲು ಅರ್ಜಿ ಕೊಟ್ಟಿರುತ್ತೇವೆ. ಯಾವ ತಾರೀಖ ಮತ್ತು ಯಾವ ವರ್ಷದಂದು ಕೊಟ್ಟಿರುತ್ತೇವೆ ಎಂದು ನೆನಪಿಲ್ಲ. ದಾವಾ ಜಮೀನುಗಳಿಗೆ ನಮ್ಮ ಹೆಸರು ದಾಖಲ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ಹೆಸರು ದಾಖಲ ಆಗಿವೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರ ಪಡಿಸಿರುತ್ತೇವೆ. ಗುಡಸ ಗ್ರಾಮದ ಸುತ್ತಮುತ್ತ ಸುಮಾರು 90 ಪ್ರತಿಶತ ನೀರಾವರಿ ಜಮೀನುಗಳು ಇವೆ ಎಂದರೆ ಸರಿ. ಸುಮಾರು 10 ವರ್ಷಗಳ ಹಿಂದೆ ದಾವಾಸ್ತಿಗಳ ಬೆಲೆ ಪ್ರತಿ ಎಕರೆಗೆ 20 ಲಕ್ಷ ರೂ. ಇದ್ದವು ಎಂದರೆ ನನಗೆ ಗೊತ್ತಿಲ್ಲ.

ನಿ.ಪಿ-20 ಮತ್ತು 21 ರ ದಾಖಲೆಗಳನ್ನು ನೋಡಿ ತಿಳಿದುಕೊಂಡು ಹಾಜರ ಪಡಿಸಿರುತ್ತೇನೆ. ದಾವಾಸ್ತಿಗಳ ಜಮೀನುಗಳಿಗೆ ಯಾವತ್ತೂ ನಮ್ಮ ಹೆಸರು ದಾಖಲ ಆಗಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಗಾಗಿ ಸುಳ್ಳು ದಾಖಲೆಗಳನ್ನು ಹಾಜರ ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮದುವೆ ಆಗಿರುತ್ತದೆ ಎಂದರೆ ಸರಿ. ಆದರೆ ನಮ್ಮ ತಂದೆ ನನ್ನನ್ನು ತವರು ಮನೆಯಲ್ಲಿ ಉಳಿಸಿಕೊಂಡಿರುತ್ತಾರೆ . ನನ್ನ ಗಂಡನ ಹೆಸರು ನನಗೆ ಗೊತ್ತಿಲ್ಲ. ನನಗೆ ಮದುವೆ ಆಗಿದ್ದರೂ ಸಹ ಕಾಂಬಳೆ ಎಂದು ಅಡ್ಡಹೆಸರನ್ನು ಖೊಟ್ಟಿ ರೀತಿಯಿಂದ ನಿ.ಪಿ-9 ರಲ್ಲಿ ದಾಖಲ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ